ಆ) ಹೊನ್ನಾಳಿ ತಾಲ್ಲೂಕು ಕಳೆದ ವರ್ಷ ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿದ್ದರೂ ಸಹ ಕೆಲವು ಹಳ್ಳಿಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಘೋಷಿಸದಿರಲು ಕಾರಣವೇನು ?

ಆ) ಸರ್ಕಾರದವರು ಈಗಲಾದರೂ ಇಡೀ ತಾಲ್ಲೂಕನ್ನೇ ಅಭಾವ ಪೀಡಿತ ತಾಲ್ಲೂಕೆಂದು ಘೋಷಿಸುವರೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಆ) ಹೊನ್ನಾಳಿ ತಾಲ್ಲೂಕಿನ ಒಟ್ಟು ೧೬೮ ಗ್ರಾಮಗಳಲ್ಲಿ ಬೆಳೆ ಪರಿಸ್ಥಿತಿಯನ್ನಾಧರಿಸಿ ೧೩೦ ಗ್ರಾಮಗಳನ್ನು ಅಭಾವ ಪೀಡಿತವೆಂದು ಗುರುತಿಸಲಾಗಿತ್ತು. ನಂತರ ಬೆಳೆ ಕಟಾವು ಸಮೀಕ್ಷೆ ಮಾಡಿದ ಮೇಲೂ ಕಂಡು ಬಂದ ಅಂಶವೆಂದರೆ ೮ ಆಣೆಗಿಂತ ಕಡಿಮೆ ಉತ್ಪನ್ನವಾಗಿದ್ದ ಗ್ರಾಮಗಳ ಒಟ್ಟು ಸಂಖ್ಯೆ ೧೩೧ ಆಗಿದೆ. ಹೀಗಾಗಿ ತಾಲ್ಲೂಕಿನಲ್ಲಿ ಒಟ್ಟು ೧೩೧ ಗ್ರಾಮಗಳು ಮಾತ್ರ ಬರಗಾಲ ಪೀಡಿತವೆಂದು ಗುರ್ತಿಸಲ್ಪಟ್ಟವು. ಇನ್ನುಳಿದ ಹಳ್ಳಿಗಳಲ್ಲಿ ೮ ಆಣೆಗಿಂತ ಹೆಚ್ಚು ಉತ್ಪನ್ನವಾಗಿದ್ದುದರಿಂದ, ಈ ಎಲ್ಲ ಹಳ್ಳಿಗಳನ್ನೂ ಬರಗಾಲ ಪೀಡಿತವೆಂದು ಪರಿಗಣಿಸಲಾಗಿಲ್ಲ. ಸಮೀಕ್ಷೆ ಆಧಾರದ ಮೇಲೆ ೮ ಆಣೆ ಗಿಂತ ಕಡಿಮೆ ಉತ್ಪನ್ನವಾಗಿದ್ದ ೧೩೧ ಗ್ರಾಮಗಳಿಗೆ ಸಂಬಂಧಿಸಿದಂತೆ ಭೂ ಕಂದಾಯ ಮನ್ನಾ ಪೂರ್ಣ ವಸೂಲಾತಿ ಮುಂದೂಡಿಕೆ ಅರ್ಧ ವಸೂಲಾತಿ ಮುಂದೂಡಿಕೆ ಆದೇಶವನ್ನು ನೀಡಲಾಗಿದ್ದು ವಿವರ ಈ ರೀತಿ ಇರುತ್ತದೆ.

೧. ಭೂ ಕಂದಾಯ ಪೂರ್ಣ ಮನ್ನಾ ಮಾಡಿರುವುದು — ೪೫ ಗ್ರಾಮಗಳು — ಭೂ ಕಂದಾಯ ಮೊತ್ತ ರೂ. ೪೭,೫೯–೫೦

೨. ಭೂ ಕಂದಾಯ ಪೂರ್ಣ ವಸೂಲಾತಿ ಮುಂದೂಡಿರುವುದು ... ೫೭ ಗ್ರಾಮಗಳು ರೂ. ೫೪,೭೭೬–೪೮

೩. ಭೂ ಕಂದಾಯ ಅರ್ಧ ವಸೂಲಾತಿ ಮುಂದೂಡಿರುವುದು ೪೯ ಗ್ರಾಮಗಳು ರೂ. ೫೪,೫೦೫–೧೦

ಆ) ಈ ವರ್ಷ ಮುಂಗಾರಿನಲ್ಲಿ ಮಳೆ ಪರಿಸ್ಥಿತಿಯನ್ನು ಸತತವಾಗಿ ಅವಲೋಕಿಸಲಾಗುತ್ತದೆ. ಪರಿಸ್ಥಿತಿಯು ಒಂದು ಪಕ್ಷ ಹದಗೆಟ್ಟಲ್ಲಿ ತಾಲ್ಲೂಕಿನಲ್ಲಿ ಎಷ್ಟೆಷ್ಟು ಗ್ರಾಮಗಳಲ್ಲಿ ಅಭಾವ ಪರಿಸ್ಥಿತಿಯು ಉದ್ಭವಿಸುವುದೋ ಅಂತಹ ಹಳ್ಳಿಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಗುರುತಿಸಲಾಗುವುದು.

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಹೇಳಿಕೆಯ ಪ್ರಕಾರ ಹೊನ್ನಾಳಿ ತಾಲ್ಲೂಕಿನ ೧೩೧ ಹಳ್ಳಿಗಳನ್ನು ಹೊರತುಪಡಿಸಿ ಉಳಿದ ಹಳ್ಳಿಗಳಲ್ಲಿ ಎಂಟು ಆಣೆಗಿಂತ ಹೆಚ್ಚು ಬೆಳೆ ಆಗಿರುವುದರಿಂದ ಅವುಗಳನ್ನು ಬರಗಾಲ ಪೀಡಿತ ಗ್ರಾಮಗಳೆಂದು ಪರಿಗಣಿಸಲಾಗಿಲ್ಲವೆಂದು ತಿಳಿದುಬರುತ್ತದೆ. ಆದರೆ ಕಂದಾಯ ಇಲಾಖೆಯವರು ಈ ವರದಿಯನ್ನು ಸರಕಾರಕ್ಕೆ ಕಳುಹಿಸಿದ್ದುದು ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ. ಕಳೆದ ವರ್ಷ ಇಡೀ ತಾಲ್ಲೂಕಿನಲ್ಲಿ ಎಂಟು ಆಣೆಗಿಂತ ಕಡಿಮೆ ಫಸಲು ಆಗಿದೆ. ಕಂದಾಯ ಇಲಾಖೆಯವರು ವರದಿ ಕಳುಹಿಸಿದ ನಂತರ, ಇಡೀ ತಾಲ್ಲೂಕಿನಲ್ಲಿ ಬೆಳೆದು ನಿಂತಿದ್ದ ಬೆಳೆಯೆಲ್ಲಾ ಒಣಗಿ ಹೋಗಿ, ಇಡೀ ತಾಲ್ಲೂಕು ಬರಗಾಲ ಪೀಡಿತ ಪ್ರದೇಶವಾಯಿತು. ಕೆಲವು ಕಡೆ ಬರಗಾಲ ಪರಿಹಾರ ಕಾಮಗಾರಿಗಳನ್ನೂ ಕೈಗೊಳ್ಳಲಾಯಿತು. ಎಲ್ಲಾ ೧೬೮ ಗ್ರಾಮಗಳೂ ಸಹ ಬರಗಾಲಕ್ಕೆ ತುತ್ತಾಗಿವೆ. ಆದರೆ ವರದಿ ಸರಕಾರಕ್ಕೆ ಮುಂಚೆಯೇ ಬಂದಿದ್ದರಿಂದ, ಉಳಿದ ಗ್ರಾಮಗಳ ರೈತರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಕೊಡತಕ್ಕಂಥ ಸಾಲ ಮುಂತಾದ ಸೌಲಭ್ಯಗಳಿಂದ ವಂಚಿತರಾದರು. ಈಗ ಅವರಿಗೆ ಕಂದಾಯ ವಸೂಲಿ ಮತ್ತೊಂದು ಎಂದು ತಗಾದೆ ಮಾಡುತ್ತಿದ್ದಾರೆ. ಬರಗಾಲ ಪರಿಹಾರ ಕಾಮಗಾರಿಗಳನ್ನು ಇಡೀ ತಾಲ್ಲೂಕಿನಲ್ಲಿ ಕೈಗೊಂಡು ಇಡೀ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ, ತಾಲ್ಲೂಕಿನ ಎಲ್ಲಾ ಗ್ರಾಮಗಳೂ ಸಹ ಬರಗಾಲ ಪೀಡಿತ ಗ್ರಾಮಗಳು ಎಂದು ಘೋಷಣೆ ಮಾಡಿ ಅಲ್ಲಿ ಭೂ ಕಂದಾಯವನ್ನು ಮನ್ನಾ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ಪರಿಶೀಲನೆ ಮಾಡಿ ಆದೇಶ ಕೊಡುತ್ತೇನೆ.

ಕರ್ನಾಟಕದಲ್ಲಿ ಸಹಕಾರ ಸಂಘಗಳ ಪುನರ್ವಿಂಗಡನೆಯ ಬಗ್ಗೆ

೭೫ (೪೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ವಿ.ಎಸ್.ಎಸ್.ಎನ್., ಎಫ್.ಎಸ್.ಸಿ.ಎಸ್. ಮತ್ತು ಎಸ್.ಸಿ.ಎಫ್.ಎಸ್.ಸಿ.ಎಸ್. ಹಾಗೂ ಇತ್ಯಾದಿ)

ಆ) ಆಗಿನ ಗ್ರಾಮಪಂಚಾಯಿತಿಗಳ ಸರಹದ್ದುಗಳನ್ನು ಆಧರಿಸಿ ಇವನ್ನು ರಚಿಸಲಾಗಿತ್ತೆ?

ಇ) ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಸ್ಥಾಪನೆಯಿಂದಾಗಿ ಸಹಕಾರ ಸಂಘಗಳ ಪುನರ್ ವಿಂಗಡಣೆಯನ್ನು ಮಂಡಲ್ ಪಂಚಾಯಿತಿಗಳ ಆಧಾರದ ಮೇಲೆ ಅಗತ್ಯತೆ ಕಂಡು ಬಂದಲ್ಲಿ ಸರ್ಕಾರದವರು ಅಧಿಕಾರ ಚಲಾವಣೆ ದೃಷ್ಟಿಯಿಂದ ಸಹಕಾರ ಸಂಘಗಳ ವ್ಯಾಪ್ತಿಯನ್ನು ವಿಂಗಡಿಸುವರೆ ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ದಿನಾಂಕ ೩೦-೬-೮೬ಕ್ಕೆ ೪೮೧೪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಇರುತ್ತವೆ.

ಆ) ಇಲ್ಲ.

ಇ) ಆರ್ಥಿಕವಾಗಿ ಶಕ್ತಿಯುತವಾಗಿ ನಿಲ್ಲುವ ಬಗ್ಗೆ ಹಾಗೂ ಸದಸ್ಯರ ಅಗತ್ಯಗಳನ್ನು ಪೂರೈಸುವ ಬಗ್ಗೆ ರಿಸರ್ವ್ ಬ್ಯಾಂಕ್ ನಿರೂಪಿಸಿದ ನಿಯಮಗಳನ್ನು ಆಧರಿಸಿ ಪ್ರಾಥಮಿಕ ಕೃಷಿ ಸೇವಾ ಸಹಕಾರ ಸಂಘಗಳನ್ನು ಪುನರ್‌ಸಂಘಟನೆ ಮಾಡಿರುವುದರಿಂದ ಮಂಡಲ ಪಂಚಾಯಿತಿಗಳ ಆಧಾರದ ಮೇಲೆ ಪುನರ್ ವಿಂಗಡಣೆ ಮಾಡುವ ವಿಷಯ ಬರಲಾರದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಒಟ್ಟು ನಾಲ್ಕು ಕೋಟಿ ಜನಕ್ಕೆ ೪೮೧೪ ಸಹಕಾರ ಸಂಘಗಳು ಇವೆ. ಈಗ ಗ್ರೀನ್ ಕಾರ್ಡ್ಸ್ ಮತ್ತು ಇತರ ಕಾರ್ಡ್ಸ್‌ನ್ನು ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದಾರೆ. ಸುಮಾರು ಅರ್ಧದಷ್ಟು ಫೇರ್ ಪ್ರೈಸ್ ಡಿಪೋಗಳನ್ನು ಪ್ರೈವೇಟ್ ಪರ್ಸನ್ಸ್‌ಗೆ ಕೊಟ್ಟಿದ್ದಾರೆ. ಇದರಲ್ಲಿ ಅನೇಕ ಅವ್ಯವಹಾರಗಳು ಜರಗುತ್ತಿವೆ. ಆದುದರಿಂದ ಅವುಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವುದು ಒಳ್ಳೆಯದಲ್ಲವೇ ? ಒಂದು ಕಡೆ ಸೊಸೈಟಿ, ಇನ್ನೊಂದು ಕಡೆ ಮಂಡಲ್ ಪಂಚಾಯತಿ ಆಫೀಸ್ ಇದ್ದರೆ, ಹಳ್ಳಿಯಿಂದ ಹೋಗಿ ಬರುವವರಿಗೆ ತೊಂದರೆಯಾಗುತ್ತದೆ. ಈಗ ಹೇಗಿದ್ದರೂ ನೀವು ಮಂಡಲ್ ಪಂಚಾಯತ್ ಮಾಡುತ್ತಿದ್ದೀರಿ. ಅದರ ಆಧಾರವನ್ನು ಅನುಸರಿಸಿ, ಇವುಗಳನ್ನು ಪುನರ್ ವಿಂಗಡಣೆ ಮಾಡುವುದರಿಂದ ಜನಗಳಿಗೆ ಸಹಾಯ ಆಗುವುದಿಲ್ಲವೇ ? ಇದರ ಬಗ್ಗೆ ಸ್ವಲ್ಪ ಪರ್ಯಾಲೋಚಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಅಧ್ಯಕ್ಷರೇ, ನಾಲ್ಕು ಕೋಟಿ ಜನಕ್ಕೆ ನಾಲ್ಕುಸಾವಿರ ಸೊಸೈಟಿ ಎಂದು ಮಾನ್ಯ ಸದಸ್ಯರು ಹೇಳಿದರು. ಈ ನಾಲ್ಕು ಸಾವಿರ ಸೊಸೈಟಿಗಳು ಎಂದರೆ ಇವು ಪ್ರಾಥಮಿಕ ಸಹಕಾರ ಸಂಘಗಳು. ಒಟ್ಟಾರೆ ನಮ್ಮ ರಾಜ್ಯದಲ್ಲಿ ೨೩ ಸಾವಿರ ಸಹಕಾರ ಸಂಘಗಳು ಇವೆ. ರೈತರಿಗೆ ಸಾಲ ಕೊಡುವುದಕ್ಕೆ ಇರುವುದು ಈ ೪೮೧೦ ಸಹಕಾರ ಸಂಘಗಳು. ಈ ಸಹಕಾರ ಸಂಘಗಳಲ್ಲಿ ಕೆಲವಕ್ಕೆ ದವಸ ಧಾನ್ಯಗಳನ್ನು ವಿತರಣೆ ಮಾಡುವುದಕ್ಕೆ ಆಗಲಿಲ್ಲ. ಈ ಸಹಕಾರ ಸಂಘಗಳ ಆರ್ಥಿಕ ಶಕ್ತಿ ಕುಂದಿ ಹೋಗಿರುವುದರಿಂದ ಆ ರೀತಿ ಮಾಡುವುದಕ್ಕೆ ಆಗಲಿಲ್ಲ. ಮಂಡಲ್ ಪಂಚಾಯತ್‌ಗೆ ಒಂದೊಂದು ಸಹಕಾರ ಸಂಘ ಮಾಡಿದರೆ, ಈಗ ನಾಲ್ಕು ನಾಲ್ಕು ಪಂಚಾಯತಿಗೆ ಒಂದರಂತೆ ಸಹಕಾರ ಸಂಘಗಳನ್ನು ಮಾಡಬೇಕಾಗುತ್ತದೆ. ಈಗ ಎರಡು ಮೂರು ಪಂಚಾಯತಿಗೆ ಒಂದು ಸಹಕಾರ ಸಂಘ ಮಾಡಿದ್ದೇವೆ. ಮಂಡಲ್ ಪಂಚಾಯತಿಗೆ ಒಂದರಂತೆ ಮಾಡಿಬಿಟ್ಟರೆ ಅಲ್ಲಿಗೆ ಯಾರೂ ಕೊಂಡುಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ಸಹಕಾರ ಸಂಘಗಳನ್ನು ಮಾಡಿರುವುದು ರಿಸರ್ವ್ ಬ್ಯಾಂಕ್ ನಿಯಮಗಳ ಪ್ರಕಾರ, ಅವರು ನಿಯಮಗಳನ್ನು ಮಾಡಿದ್ದಾರೆ. ಅಲ್ಲಿ ಎರಡು ಲಕ್ಷ ಸಾಲ ಕೊಡಬೇಕು, ಐದು ಸಾವಿರ ಎಕರೆ ಕಲ್ಟಿವಬಲ್ ಲ್ಯಾಂಡ್ ಇರಬೇಕು ಹೀಗೆಲ್ಲಾ ನಿಯಮ ಹಾಕಿದ್ದಾರೆ. ಇದರ ಮೇಲೆ ರಚನೆ ಮಾಡಿದ್ದೇವೆ. ಇದರಲ್ಲೂ ಕೂಡಾ ಈಗಾಗಲೇ ಕೆಲವು ಕಡೆಗಳಿಂದ ಅರ್ಜಿ ಬಂದಿದೆ. ಈಗಿರುವ ಸಹಕಾರ ಸಂಘಗಳು ಬಹಳ ದೂರ ಆಯಿತು. ಹತ್ತಿರ ಮಾಡಿ, ಎಂದು ಕೇಳುತ್ತಿದ್ದಾರೆ. ಅವಶ್ಯಕತೆ ಇದ್ದರೆ, ವಯಬಿಲಿಟಿ ನೋಡಿಕೊಂಡು, ಅಂತಹ ಕಡೆ ಸಹಕಾರ ಸಂಘಗಳನ್ನು ಕೊಡುತ್ತಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ನಾನು ಕೇಳುವುದು ಏನೆಂದರೆ, ಎಲ್ಲಾ ಸಹಕಾರ ಸಂಘಗಳ ಮುಖಾಂತರ ಗ್ರೀನ್ ಕಾರ್ಡ್‌ನ್ನು ಮತ್ತು ಬೇರೆ ಕಾರ್ಡ್‌ನ್ನು ಡಿಸ್ಟ್ರಿಬ್ಯೂಷನ್ ಮಾಡಿಸಬೇಕು. ಒಂದನ್ನು ಎರಡಾದರೂ ಮಾಡಿ, ಪೂರ್ತಿ ಫುಡ್ ಡಿಸ್ಟ್ರಿಬ್ಯೂಷನ್ ಎಲ್ಲಾ ಸಹಕಾರ ಸಂಘಗಳ ಮುಖಾಂತರ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಆರ್.ಎಲ್. ಜಾಲಪ್ಪ.—ಈ ಗ್ರೀನ್ ಕಾರ್ಡ್‌ನ್ನು ಕೊಡುವುದು, ಫುಡ್ ಡಿಸ್ಟ್ರಿಬ್ಯೂಷನ್ ಮಾಡುವುದು, ಯಾರು ಯಾರಿಗೆ ಎಷ್ಟೆಷ್ಟು ಕೊಡಬೇಕು, ಯಾರು ಯಾರಿಗೆ ಗ್ರೀನ್ ಕಾರ್ಡ್‌ನ್ನು ಕೊಡಬೇಕು, ಯಾವ ರೀತಿ ಕೊಡಬೇಕು ಇದನ್ನೆಲ್ಲಾ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್ ನವರು ಮಾಡುತ್ತಾರೆ, ಇದರ ಬಗ್ಗೆ ಅವರು ತೀರ್ಮಾನ ಕೈಗೊಳ್ಳುತ್ತಾರೆ. ಸಹಕಾರ ಸಂಘಗಳ ಸಾಮರ್ಥ್ಯ ನೋಡಿ, ಅದರ ವಯಬಿಲಿಟಿ ನೋಡಿ, ಅಂತಹ ಕಡೆ ಇದನ್ನು ಕೊಡುತ್ತಾರೆ. ನಾವು ಸಹಕಾರ ಸಂಘಗಳಿಗೆ ಸಾಲ ಕೊಡುತ್ತೇವೆ, ಎಲ್ಲಿ ಸಾಲ ತೆಗೆದುಕೊಂಡು ನುಂಗಿ ಹಾಕಿದ್ದಾರೆ, ಅಂತಹ ಕಡೆ ಕ್ರಿಮಿನಲ್ ಆಕ್ಷನ್ ತೆಗೆದುಕೊಂಡಿದ್ದೇವೆ, ಅವರಿಗೆ ಪುನಃ ಸಾಲ ಕೊಡುವುದಕ್ಕೆ ಹೋಗಿಲ್ಲ, ಅಂತಹ ಸಹಕಾರ ಸಂಘಗಳಿಗೆ ಗ್ರೀನ್ ಕಾರ್ಡ್‌ನ್ನು ವಿತರಣೆ ಮಾಡಲು ಕೊಟ್ಟಿಲ್ಲ, ಉಳಿದ ಸಹಕಾರ ಸಂಘಗಳಿಗೆ ಕೊಟ್ಟಿದೆ.

ಅಧ್ಯಕ್ಷರು.—ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ) ಇವರ ಪ್ರಶ್ನೆ ಸಂಖ್ಯೆ ೭೬ (೫೧೮)ನ್ನು ಮುಂದೂಡಲಾಗಿದೆ.

೭೭ (೨೭೦) ಶ್ರೀ ಯು. ಭೂಪತಿ (ಸದಸ್ಯರು ಹಾಜರಿಲ್ಲ)

೭೮ (೭೨) ಶ್ರೀಪತಿ ಮುಖ್ತಾರುನ್ನೀಸಾ (ಸದಸ್ಯೆಯರು ಹಾಜರಿಲ್ಲ)

೭೯ (೫೧) ಶ್ರೀ ಜಿ.ಎಸ್. ಆಚಾರ್ ಇವರ ಪರವಾಗಿ ಶ್ರೀ ಬಸವರಾಜ್ ಇವರು ಕೇಳಬಹುದು.

ಅಕ್ರಮಣಿಗಳ ಸಕ್ರಮೀಕರಣ ಮತ್ತು ದಂಡ ಹೇರಿಕೆ ಬಗ್ಗೆ

೮೯ (೫೧)(೧) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಹುಕಾಲದಿಂದ ಸರಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡ ಭೂಹೀನರಿಗೆ, ಕೃಷಿ ಕಾರ್ಮಿಕರಿಗೆ ಹಾಗೂ ಚಿಕ್ಕ ರೈತರಿಗೆ ಅವುಗಳನ್ನು ಸಕ್ರಮಗೊಳಿಸಲು ಸರಕಾರ ತತ್ವಶಃ ಒಪ್ಪಿದ್ದು, ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಆ) ಕುಷ್ಕಿ ಜಮೀನಿಗೂ ಈ ತತ್ವವನ್ನು ಅಳವಡಿಸಲಾಗುವುದೇ?

ಇ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಇಂಥ ಬಡ ಅನಧಿಕೃತ ಸಾಗುವಳಿದಾರರಿಗೆ ವಿಪರೀತ (ಟಿಟಫ್ಫೈನ್) ವಿಧಿಸಲಾಗಿದೆ ಎಂಬ ದೂರುಗಳಿದ್ದು ಅದನ್ನು ಕಡಿಮೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಸರ್ಕಾರವು ಆದೇಶ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧೯-೯-೧೯೭೭ ಮತ್ತು ಸಂಖ್ಯೆ ಆರ್‌ಡಿ ೨೭ ಎಲ್‌ಜಿಪಿ ೮೧ ದಿನಾಂಕ ೨೭-೩-೧೯೮೧ರ ಪ್ರಕಾರ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ ಸಣ್ಣ ಮತ್ತು ಅತಿ ಸಣ್ಣ ರೈತರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಪರವಾಗಿ ಸಕ್ರಮೀಕರಣಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮಕೈಗೊಂಡಿರುತ್ತದೆ. ಅಲ್ಲದೆ ಇತ್ತೀಚಿನ ಒತ್ತುವರಿ ಮತ್ತು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರಲ್ಲಿ ಅನಿಶ್ಚಿತತೆಯನ್ನು ಹೋಗಲಾಡಿಸಿ ವ್ಯವಸಾಯದ ಕಸುಬನ್ನು ನಿಶ್ಚಿತರೀತಿಯಲ್ಲಿ ಮಾಡಲು ಅನುವಾಗುವಂತೆ ಭೂಕಂದಾಯ ಅಧಿನಿಯಮ, ೧೯೬೪ರ ಕಲಂ ೧೧ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಈ ಒತ್ತುವರಿ ಮತ್ತು ಬಗರ್‌ಹುಕುಂ ಸಾಗುವಳಿಯನ್ನು ಮಾಡುತ್ತಿರುವ ಜನರಿಗೆ ಸಕ್ರಮಗೊಳಿಸುವ ವಿಷಯವು ಸರ್ಕಾರದ ಪೀಠ್ಯ ಪರಿಶೀಲನೆಯಲ್ಲಿದೆ.